**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

ಸಿ.ಸಿ.ನಂಃ **1378/2018**

ಸಿಡಬ್ಲೂಃ **3**

ಪಿ.ಡಬ್ಲೂಃ **2**

| | | |
|---|---|---|
| ಸಾಕ್ಷಿಯ ಹೆಸರು | : | ಗುರುಸಿದ್ದ ರಾಮಪ್ಪ ಹವಾಲ್ದಾರ |
| ವಯಸ್ಸು | : | **67** ವರ್ಷ |
| ಉದ್ಯೋಗ | : | ನಿವೃತ್ತ ನೌಕರ |
| ವಾಸ್ತವ್ಯ | : | ಖಾನಾಪುರ |

ದಿನಾಂಕಃ **03-09-2025**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸರ್ಕಾರಿ ವಕೀಲರಿಂದಃ-</u>**

ಚಾಸಾ 1 ಹಾಗೂ 2 ನನಗೆ ಪರಿಚಯ. ಸಾಕ್ಷಿದಾರರು ಘಟನಾ ಸ್ಥಳದ ಪಂಚನಾಮೆಯ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-4 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 29.10.2017 ರಂದು ಖಾನಾಪೂರ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಚಾಸಾ 1 ರವರ ಮನೆಯಲ್ಲಿ ಕಳುವಾದ ಬಗ್ಗೆ ನಾನು ಸಾಕ್ಷಿ ಎಂದು ಸಹಿ ಮಾಡಿರುತ್ತೇನೆ.

ಸಾಕ್ಷಿದಾರರು ಆರೋಪಿತರು ತೋರಿಸುವ ಘಟನಾ ಸ್ಥಳದ ಪಂಚನಾಮೆಯ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-5 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 24.12.2017 ರಂದು ಖಾನಾಪೂರ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಪೊಲೀಸ ಠಾಣೆಯಲ್ಲಿ ಪಂಚನಾಮೆ ಮಾಡಿ, ಅದರ ಬಗ್ಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ.

ಸಾಕ್ಷಿದಾರರು ನಿಪಿ-3 ಫೋಟೋವನ್ನು ನೋಡಿ ಅದರಲ್ಲಿ ಬಲದಿಂದ ಎರಡನೆಯದವನು ನಾನೇ ಎಂದು ನುಡಿದಿರುತ್ತಾರೆ. ನಿಪಿ-3 ನ್ನು ಚಾಸಾ 1 ರವರ ಮನೆಯ ಮುಂದೆ ತೆಗೆಯಲಾಗಿದೆ. ಸಾಕ್ಷಿದಾರರು ಆರೋಪಿತರನ್ನು ವಿಸಿಯಲ್ಲಿ ನೋಡಿ ಗುರುತಿಸಿದ್ದು ಇರುತ್ತದೆ.

(ಈ ಹಂತದಲ್ಲಿ ಸರ್ಕಾರಿ ವಕೀಲರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ವಕೀಲರಿಂದಃ-**

ನಿಪಿ-4 ಪಂಚನಾಮೆಯನ್ನು ದಿಃ29.10.2017 ರಂದು ಮಧ್ಯಾಹ್ನ 12.30 ಗಂಟೆಯಿಂದ 01.30 ಗಂಟೆವರೆಗೆ ಚಾಸಾ 1 ರವರ ಮನೆಯಲ್ಲಿ ಮಾಡಲಾಗಿದೆ ಎಂದು ಸೂಚಿಸಿದರೆ ಸರಿ . ಚಾಸಾ 1 ರವರ ಮನೆಯಲ್ಲಿ ಒಂದು ಬಂಗಾರದ ಸರ ಹಾಗೂ ರೂ.400 ರೂ ಚಿಲ್ಲರೆ ಕಳುವಾಗಿತ್ತು ಎಂದು ಸೂಚಿಸಿದರೆ ಸರಿ .

ನಿಪಿ-5ನ್ನು ದಿಃ24.12.2017 ರಂದು ಚಾಸಾ 1 ರವರ ಮನೆಯ ಮುಂದೆ ಬೆಳಗ್ಗೆ 09.30 ರಿಂದ 10.30 ಗಂಟೆವರೆಗೆ ಮಾಡಲಾಯಿತು ಎಂದು ಸೂಚಿಸಿದರೆ ಸರಿ . ಸದರಿ ಸಮಯದಲ್ಲಿ ಆರೋಪಿತರು ಅಪರಾಧ ಜಾಗೆಯನ್ನು ತೋರಿಸಿದರು ಎಂದು ಸೂಚಿಸಿದರೆ ಸರಿ. ನಂತರ ನಿಪಿ-3 ರಂತೆ ಛಾಯಾಚಿತ್ರವನ್ನು ತೆಗೆಯಲಾಯಿತು ಎಂದು ಸೂಚಿಸಿದರೆ ಸರಿ .

**ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ . ಎನ್ ವಾಯ ಎಂ ವಕೀಲರಿಂದಃ-**

ನಾನು ಪಂಚನಾಮೆಯ ದಿನ ನನ್ನ ಕೆಲಸಕ್ಕೆ ಹೋಗಿಲ್ಲ. ಆ ಸಮಯದಲ್ಲಿ ನಾನು ಅಮಾನತ್ತನಲ್ಲಿ ಇದ್ದೆ. ನಾನು ಆಗ ತಹಸೀಲ್ದಾರ ಕಚೇರಿಯಲ್ಲಿ ಎಫ್ ಡಿಸಿ ಎಂದು ಕೆಲಸ ಮಾಡುತ್ತಿದ್ದೆ ಎಂದು ಸೂಚಿಸಿದರೆ ಸರಿ . ಆಗ ಸಿಆರ ಪಿಸಿ ಕಲಂ 107 ರಡಿಯಲ್ಲಿ ಬರುವ ಪ್ರಕರಣದ ಕಡತಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ

ಎಂದು ಸೂಚಿಸಿದರೆ ಸರಿ . ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ನೀಡಿಲ್ಲ, ಪೊಲೀಸರು ಬರೆದಿರುತ್ತಾರೆ. ಪೊಲೀಸರು ಬರೆದ ನಂತರ ಬರೆದ ಎಲ್ಲ ವಿಷಯಗಳನ್ನು ನನಗೆ ಹೇಳಿದ ನಂತರ ಸಹಿ ಮಾಡಿರುತ್ತೇನೆ. ನಾನು ಪಂಚನಾಮೆಯನ್ನು ಬರೆಯಲು ಯಾವುದೇ ಮಾಹಿತಿ ನೀಡಿಲ್ಲ. ನಾನು ಕಳುವು ಆಗುವ ಸಮಯದಲ್ಲಿ ನೋಡಿಲ್ಲ. ಪೊಲೀಸರು ನಮ್ಮನ್ನು ಹಾಗೂ ಆರೋಪಿತರನ್ನು ನಿಲ್ಲಿಸಿ ಫೋಟೋ ತೆಗೆದರು ಎಂದು ಸೂಚಿಸಿದರೆ ಸರಿ . ನಾನು ಈ ಮೊದಲು ಆರೋಪಿತರನ್ನು ಎಲ್ಲಿಯೂ ನೋಡಿರುವುದಿಲ್ಲ, ಅವರ ಪರಿಚಯ ಕೂಡ ನನಗೆ ಇರಲಿಲ್ಲ. ಚಾಸಾ 1 ರವರಿಗೆ ಅನುಕೂಲವಾಗುವ ದೃಷ್ಟಿಯಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದು ಸೂಚಿಸಿದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಆರೋಪಿತರು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ . ಚಾಸಾ 1 ರವರ ಮನೆಯಲ್ಲಿ ಯಾವುದೇ ಕಳುವು ಆಗದೇ ಇದ್ದರೂ ಸಹಿತ ಸುಳ್ಳು ಸಾಕ್ಷಿ ನುಡಿಯುುತ್ತಿದ್ದೆನೆ ಎಂದು ಸೂಚಿಸಿದರೆ ಸರಿಯಲ್ಲ . ಆರೋಪಿತರಿಗೂ ಹಾಗೂ ಈ ಪ್ರಕರಣದಲ್ಲಿ ಕಳುವಾಗಿದೆ ಎಂದು ಹೇಳುವ ಬಂಗಾರದ ಸರಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸಿದರೆ ಸರಿಯಲ್ಲ .

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ . ಎಚ್ ಎನ್ ಡಿ ವಕೀಲರಿಂದಃ-**

1ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲುನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಖಾನಾಪೂರ